ಮೈಸೂರಿನ ಗೋಕುಲಂ ಅಥವಾ ಕುಂಬಾರಕೊಪ್ಪಲು ಬಡಾವಣೆಯಲ್ಲಿ ಕ್ಯಾಷ್ ಕೌಂಟರ್ ಪ್ರಾರಂಭಿಸುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 160(318)

ಸದಸ್ಯರ ಹೆಸರು ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ)

ಉತ್ತರಿಸುವ ಸಚಿವರು ಶ್ರೀ ಎಂರಕುಮಾರ್ ಅ ಪಾಟೀಲ್(ಇಂಧನ ರಾಜ್ಯ ಸಚಿವರು)

ಪ್ರಶ್ನೆ

ಅ ಮೈಸೂರು ನಗರದ ಗೋಕುಲಂ ಅಥವಾ ಕುಂಬಾರಕೊಪ್ಪಲು ಬಡಾವಣೆಯಲ್ಲಿ ಗ್ರಾಹಕರ ಅನುಕೂಲಕ್ಕಾಗಿ ಹಣ ಪಾವತಿಸಲು ಕೆ ಇ ಬಿ ಕ್ಯಾಷ್ ಕೌಂಟರ್ ತೆರೆಯಬೇಕೆಂದು ಮನವಿ ಸಲ್ಲಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ ಬಂದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮ ಏನು?

ಉತ್ತರ

ಅ ಹೌದು

ಆ ಮೈಸೂರು ನಗರದ ಗೋಕುಲಂ ಹಾಗೂ ಕುಂಬಾರಕೊಪ್ಪಲು ಬಡಾವಣೆಯ ವಿದ್ಯುತ್ ಗ್ರಾಹಕರ ಅನುಕೂಲಕ್ಕಾಗಿ ವಿದ್ಯುತ್ ಶುಲ್ಕ ಪಾವತಿಸಲು, ಈ ಬಡವಾಣೆಯ ಸಮೀಪವಿರುವ ವಿಜಯನಗರ ರೈಲ್ವೆ ಬಡಾವಣೆ ಸಹಕಾರ ಸೊಸೈಟಿ ಕಛೇರಿಯಲ್ಲಿ ಪ್ರತಿವಾರದ ಬುಧವಾರ ಮತ್ತು ಶನಿವಾರದ ದಿನಗಳಲ್ಲಿ ಬೆಳಿಗ್ಗೆ 10-00 ಗಂಟೆಯಿಂದ ಮಧ್ಯಾಹ್ನ 2-30ರವರಗೆ ಕ ವಿ ಪ್ರ ನಿ ನಿ ಕ್ಯಾಷ್ ಕೌಂಟರ್ ಕಾರ್ಯನಿರ್ವಹಿಸುತ್ತಿದೆ

ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿ ವಿದ್ಯುತ್ ಕಡಿತ

ಚುಕ್ಕೆ ಗುರುತಿಲ್ಲದ ಪ್ರಶ್ನ ಸಂಖ್ಯೆ 161(389)

ಸದಸ್ಯರ ಹೆಸರು ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್(ಹುಬ್ಬಳ್ಳಿ)

ಉತ್ತರಿಸುವ ಸಚಿವರು ಶ್ರೀ ಎಂರಕುಮಾರ್ ಅ ಪಾಟೀಲ್(ಇಂಧನ ಸಚಿವರು)